ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಆ ಹಣವನ್ನು ಆದಷ್ಟು ಬೇಗ ತೆಗೆದುಕೊಂಡು ಕೊಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಮಧುಗಿರಿ ಗ್ರಾಮೀಣ ಪ್ರದೇಶಕ್ಕೆ ಕುಡಿಯುವ ನೀರಿನ ಯೋಜನೆ

1028 ಶ್ರೀಮತಿ ಅನಿತಾ ಕುಮಾರಸ್ವಾಮಿ (ಮಧುಗಿರಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಧುಗಿರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಪ್ರದೇಶಗಳಲ್ಲಿ ಕುಡಿಯುವ ನೀರಿನಲ್ಲಿ ಫ್ಲೋರೈಡ್ ಅಂಶವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಕ್ಷೇತ್ರಕ್ಕೆ ಶಾಶ್ವತ ಶುದ್ಧ ಕುಡಿಯುವ ನೀರನ್ನು ಒದಗಿಸುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ (ಮಾಹಿತಿ ನೀಡುವುದು)?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಬಂದಿದೆ.

ಆ) ಸ್ಥೂಕ್ತ ಜಲಮೂಲ ಲಭ್ಯವಾದಲ್ಲಿ ಅರ್ಥಿಕ ಮತ್ತು ತಾಂತ್ರಿಕ ಕಾರ್ಯಸಿಂಧುತ್ವ ಅಧರಿಸಿ ಶಾಶ್ವತ ಕುಡಿಯುವ ನೀರಿನ ಯೋಜನೆಗಳನ್ನು ಒದಗಿಸಲು ಸರ್ಕಾರ ಸಿದ್ಧವಿದೆ. ಪರ್ಯಾಯವಾಗಿ ಸಮಸ್ಯಾತ್ಮಕ ಗ್ರಾಮಗಳಲ್ಲಿ ಮಳೆ ನೀರು ಕೊಯ್ಲು, ಡೀ–ಫ್ಲೋರಿಡೆಶನ್ ಘಟಕಗಳನ್ನು ಒದಗಿಸುವಂತಹ ಕ್ರಮಗಳನ್ನು ಕೈಗೊಳ್ಳಲಾಗಿದೆ. ಇದಲ್ಲದೆ, 13ನೇ ಹಣಕಾಸು ಆಯೋಗದಡಿ 21 DF ಘಟಕಗಳನ್ನು ಅಳವಡಿಸಲು ಪ್ರಸ್ತಾಪಿಸಲಾಗಿದೆ.

ಶ್ರೀ ಸಿ.ಬಿ. ಸುರೇಶ್ ಬಾಬು (ಶ್ರೀಮತಿ ಅನಿತಾ ಕುಮಾರಸ್ವಾಮಿಯವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಮಧುಗಿರಿ ತಾಲ್ಲೂಕಿನ ಸಾಕಷ್ಟು ಹಳ್ಳಿಗಳಲ್ಲಿ fluoride ಅಂಶವಿರುವುದರಿಂದ ನೀರನ್ನು ಕುಡಿದು ಅಲ್ಲಿನ ಸಾಕಷ್ಟು ಜನರ ಆರೋಗ್ಯ ಹಾಳಾಗಿರುವುದನ್ನು ನಾವೆಲ್ಲರೂ ಗಮನಿಸಿದ್ದೇವೆ. ಅದರ ಬಗ್ಗೆ ಶಾಶ್ವತವಾಗಿ ಏನಾದರೊಂದು ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ಅದಕ್ಕೇನು ಕ್ರಮ ತೆಗೆದುಕೊಂಡಿದ್ದಾರೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಧುಗಿರಿ ತಾಲ್ಲೂಕಿನಲ್ಲಿ ಈಗಾಗಲೇ ಉತ್ತರದಲ್ಲಿ ಹೇಳಿದಹಾಗೆ, ಬಹುಗ್ರಾಮ ಯೋಜನೆ ಇನ್ನೂ open ಆಗಿಲ್ಲ. Surface water source ಏನಾದರೂ ಸಿಕ್ಕಿದರೆ ಬಹು ಗ್ರಾಮ ಯೋಜನೆ ಯನ್ನೂ ಮಾಡಲಿಕ್ಕೆ ಸಾಧ್ಯವಿದೆ. ಆದರೆ, ಅಲ್ಲಿ ಅವಕಾಶ ಇಲ್ಲದಂಥ ಪರಿಸ್ಥಿತಿ ಇದೆ. ತಿರುಮಲ ದೇವರಹಳ್ಳಿ, ಭಕ್ತರಹಳ್ಳಿ, ಬೆಲ್ಲದಮಡಗು, ಶ್ರೀನಿವಾಸಪುರ್, ಸಪ್ಪೇಹಳ್ಳಿ ಹಾಗೂ ಮಾದೇನಹಳ್ಳಿಗಳಲ್ಲಿ 6 de-fluoride ಘಟಕವನ್ನು ಈಗ ಅಳವಡಿಸುತ್ತಿದ್ದೇವೆ. ಶುದ್ಧ ಕುಡಿಯುವ ನೀರಿನ ಪೂರೈಕೆಯನ್ನು ಮಾಡುತ್ತೇವೆ. ಈಗಾಗಲೇ 6 ಹಳ್ಳಿಗಳಲ್ಲಿ ಅಳವಡಿಸಿದ್ದೇವೆ. ಹೊಸದಾಗಿ ತುಮಕೂರು ಜಿಲ್ಲೆಗೆ 30 de- fluoride ಘಟಕಗಳನ್ನು ಈಗಾಗಲೇ ನಾವು ಒದಗಿಸಿದ್ದೇವೆ. ಮಧುಗಿರಿ ತಾಲ್ಲೂಕಿನಲ್ಲಿ 8 ಈ ರೀತಿ fluoride contents ಇರುವಂಥ ಆ ಗ್ರಾಮಗಳಲ್ಲಿ de-fluoride ಘಟಕವನ್ನು ಅಳವಡಿಸುವ ಬಗ್ಗೆ ಈಗಾಗಲೇ ನಾವು ನಿರ್ಣಯ ಕೈಗೊಂಡಿದ್ದೇವೆ. ಆದೇಶವನ್ನೂ ಹೊರಡಿಸಿದ್ದೇವೆ. Water head care centre ನವರ ಸಹಯೋಗದಲ್ಲಿ ಖಾಸಗಿಯಾಗಿ ಮತ್ತು ಉಚಿತವಾಗಿ ಹಾಗೂ ತಾಲ್ಲೂಕು, ಗ್ರಾಮ ಪಂಚಾಯಿತಿ ವತಿಯಿಂದ ಶುದ್ಧ ಕುಡಿಯುವ ನೀರು ಪೂರೈಸಲು 6 ಗ್ರಾಮಗಳೆಂದರೆ, ಪುರವರ, ಕೊಡಿಗೇನಹಳ್ಳಿ, ಹೈಡಿಹಳ್ಳಿ, ಹೊಸಕೇರಿ, ಬಡವನಹಳ್ಳಿ ಮತ್ತು ಮಿಡಿಗೇಶಿ ಇಲ್ಲಿ ಶುದ್ಧ ಕುಡಿಯುವ ನೀರನ್ನು ಪೂರೈಕೆ ಮಾಡಲು ಕ್ರಮ ಕೈಗೊಳ್ಳುತ್ತಿದ್ದೇವೆ. 2011–12ನೇ ಸಾಲಿನಲ್ಲಿ 13ನೇ ಹಣಕಾಸು ಆಯೋಗದ ಯೋಜನೆಯಡಿಯಲ್ಲಿ ಹೆಚ್ಚುವರಿ ಅನುದಾನ ಒದಗಿಸಿ ಅಗತ್ಯವಿರುವ ಪೂರಕ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಆದ್ಯತೆ ಯನ್ನು ನಾವು ಕೊಡುತ್ತೇವೆ.

ಶ್ರೀ ಸಿ.ಬಿ. ಸುರೇಶ್ ಬಾಬು : ಮಧುಗಿರಿ ತಾಲ್ಲೂಕಿನಲ್ಲಿ ಈ ಸಾರಿಯೂ ಸಹ ಸಮರ್ಪಕವಾಗಿ ಮಳೆಯಾಗಿಲ್ಲ. ಆದ್ದರಿಂದ, ಅಲ್ಲಿ ನೀರಿನ ಆಳ ತಳಮಟ್ಟಕ್ಕೆ ಹೋಗಿರುವುದರಿಂದ ದಯವಿಟ್ಟು ಹೇಮಾವತಿ ನದಿಯಿಂದ ಏನಾದರೂ ಅಲ್ಲಿಗೆ ನೀರು ಹರಿಸುವಂಥ ವ್ಯವಸ್ಥೆಯನ್ನು ಮಾಡಬೇಕು. ಕುಡಿಯುವ ನೀರಿಗೋಸ್ಕರ ಏನಾದರೂ ಕೆರೆಗಳಿಗೆ ನೀರು ಕೊಡುವಂಥ ವ್ಯವಸ್ಥೆಯ ಬಗ್ಗೆ ಸರ್ಕಾರ ಚಿಂತನೆ ಮಾಡಿದರೆ ಖಂಡಿತವಾಗಿ ಅಲ್ಲಿಯ ನೀರಿನ ಸಮಸ್ಯೆಯನ್ನು ಬಗೆಹರಿಸಬಹುದೇ ವಿನಾ: ಇವರು ಅಲ್ಲಿ de-fluoride ಘಟಕಗಳನ್ನು ಮಾಡುವುದರಿಂದ ನಮಗೆ ನೀರು ದೊರಕಿದರೆ

ನಾವು ಅದನ್ನು ಸರಿಪಡಿಸಲಿಕ್ಕೆ ಸಾಧ್ಯವಾಗುತ್ತದೆ. ಇಲ್ಲವೆಂದರೆ, ಖಂಡಿತ ವಾಗಿಯೂ ಈ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಹೇಮಾವತಿ ನದಿ ನೀರನ್ನು ಅಲ್ಲಿಗೆ ಹರಿಸಲಿಕ್ಕೆ ಏನಾದರೂ ಸಾಧ್ಯವಾದರೆ ದಯಮಾಡಿ ಅದರ ಬಗ್ಗೆ ಚಿಂತನೆ ಮಾಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಈಗಾಗಲೇ de-fluoride ಘಟಕ ಸ್ಥಾಪನೆ ಮಾಡುವ ಬಗ್ಗೆ ಹೇಳಿದ್ದೇನೆ. Surface water source ಮುಖಾಂತರ ಈ ಬಹು ಗ್ರಾಮಗಳ ಕುಡಿಯುವ ನೀರಿನ ಯೋಜನೆ ಇಡೀ ರಾಜ್ಯದಲ್ಲಿ ಎಲ್ಲಾ ಕಡೆಯೂ ಮಾಡುವಂಥ ಪ್ರಯತ್ನ ಮಾಡುತ್ತಿದ್ದೇವೆ. ನಾನು ಆಗಲೇ ಹೇಳಿದ ಹಾಗೆ, ಅಂಥ source ಇಲ್ಲಿ ಸಿಕ್ಕಿದರೆ ಅದನ್ನೂ ಮಾಡುವಂಥದ್ದು ಮಾಡುತ್ತೇವೆ. ಹೇಮಾವತಿ ನದಿ ನೀರಿನಿಂದ ಕೊಡಿ ಎಂದು ಹೇಳಿದ್ದಾರೆ. ಅದನ್ನು examine ಮಾಡುತ್ತೇವೆ. ಏನಾದರೂ feasible ಇದ್ದರೆ ಅದನ್ನು ಮಾಡಲಿಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು : ಯು.ಟಿ.ಖಾದರ್‌ರವರೆ, ತಮ್ಮ ಪ್ರಶ್ನೆಗೆ ಸಮಯ ಕೇಳಿದ್ದಾರೆ. ಕಾಲಾವಕಾಶ ಕೇಳಿದ್ದಾರೆ.

ಹೊಸದುರ್ಗ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಯೋಜನೆ

96 (172) ಶ್ರೀ ಗೂಳಿಹಟ್ಟಿ ಡಿ.ಶೇಖರ (ಹೊಸದುರ್ಗ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿತ್ರದುರ್ಗ ಜಿಲ್ಲೆಯಲ್ಲಿ ಇದುವರೆಗೂ ಶಾಶ್ವತ ಕುಡಿಯುವ ನೀರಿನ ಬವಣೆ ತಪ್ಪಿಸಲು ಸರ್ಕಾರ ಕೈಗೊಂಡ ಕ್ರಮವೇನು;

ಆ) ಹೊಸದುರ್ಗ ತಾಲ್ಲೂಕಿನಲ್ಲಿ ಶಾಶ್ವತ ಕುಡಿಯುವ ನೀರಿನ ಬವಣೆ ತಪಿಸಲು ಸರ್ಕಾರ ಇದುವರೆಗೂ ಕೈಗೊಂಡಿರುವ ಯೋಜನೆಗಳು ಯಾವುವು (ಮಾಹಿತಿ ನೀಡುವುದು);

ಇ) ಗೂಳಿಹಟ್ಟಿ ದೊಡ್ಡ ಹಳ್ಳದಿಂದ ನಾಲ್ಕು ಹಳ್ಳಿಗಳಿಗೆ ಕುಡಿಯುವ ನೀರಿನ ಯೋಜನೆ ಅನುಷ್ಠಾನ ಯಾವಾಗ ಪ್ರಾರಂಭವಾಗುತ್ತದೆ; ಈ ಯೋಜನೆ ವಿಳಂಬವಾಗಲು ಕಾರಣವೇನು?